ದಿನಾಂಕಃ **03-02-2023** ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.
ಮಧ್ಯಂತರ ಅರ್ಜಿ ನಂ. **11, 11(ಎ), 12** ಮತ್ತು **13** ರ ಪಾಟೀಸವಾಲು **:** ಶ್ರೀ ಎಸ್ ಎಂ ಎಸ್ ವಕೀಲರಿಂದಃ-

ಪರಶೆಟ್ಟಿ ವೀರಪ್ಪರವರು ನನ್ನ ದೊಡ್ಡಪ್ಪ ಎಂದರೆ ಸರಿಯಲ್ಲ, ಅವರು ನನ್ನ ತಂದೆ. ನನ್ನ ತಂದೆ ವಿರುಪಾಕ್ಷಪ್ಪ ಪರಶೆಟ್ಟಿ ಎಂದರೆ ಸಾಕ್ಷಿಯು ಅವರು ನನ್ನ ಜೈವಿಕ ತಂದೆ ಎಂದು ತಿಳಿಸಿದ್ದಾರೆ. ನನ್ನ ತಂದೆ ವಿರುಪಾಕ್ಷಪ್ಪ ಪರಶೆಟ್ಟಿಯವರ ತಂದೆಯ ಹೆಸರು ವೀರಭದ್ರಪ್ಪ ಎಂದರೆ ಸರಿ. ನನ್ನ ದೊಡ್ಡಪ್ಪ ಪರಶೆಟ್ಟಿ ವೀರಪ್ಪರವರನ್ನು ವೀರಪ್ಪ, ವೀರಣ್ಣ, ಶೆಟ್ಟಿ ವೀರಪ್ಪ, ಪರಶೆಟ್ಟಿ ವೀರಪ್ಪ ಹಾಗೂ ಹೆಚ್ ವೀರಪ್ಪ ಎಂದು ಕರೆಯುತ್ತಿದ್ದರೆಂದರೆ ಸಾಕ್ಷಿಯು ಪರಶೆಟ್ಟಿ ವೀರಪ್ಪ ಯಾನೆ ಚೌಟಾಣಿ ವೀರಪ್ಪ ಎಂದು ಕರೆಯುತ್ತಿದ್ದರೆಂದು ತಿಳಿಸುತ್ತಾರೆ. ಸದರಿ ವಿಚಾರ ನನಗೆ ತಿಳಿದಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ವಾದಿ ಮತ್ತು ಕುಬೇರಪ್ಪ, ವಸಂತಕುಮಾರ್, ವೀರಭದ್ರಪ್ಪ, ಶಾಂತರಾಜು ರವರು ಯಾವ ವಿಳಾಸದ ಮನೆಯಲ್ಲಿ ವಾಸಿಸುತ್ತಾರೆಂದು ನನಗೆ ಗೊತ್ತಿಲ್ಲ. ಅವರೆಲ್ಲರೂ ಇದೇ ಹೂವಿನಹಡಗಲಿಯ ಹಳೇ ಪಿಂಜಾರ್ ಓಣಿಯ ಹಳೆಯ 23 ನೇ ವಾರ್ಡಿನಲ್ಲಿ ವಾಸಿಸುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಮನೆಯಲ್ಲಿ ಪರಶೆಟ್ಟಿ ವೀರಪ್ಪರವರು ಮರಣಹೊಂದುವವರೆಗೂ ಅವರೊಡನೆ ವಾಸಿಸುತ್ತಿದ್ದರೆಂದರೆ ಸರಿಯಲ್ಲ. ಸದರಿ ಮನೆಗೆ ವೀರಪ್ಪರವರೇ ತೆರಿಗೆಯನ್ನು ಪಾವತಿಸುತ್ತಿದ್ದರು ಎಂದರೆ ಸರಿಯಲ್ಲ.

ನಿಮ್ಮ ದೊಡ್ಡಪ್ಪ ಏನೆಂದು ಸಹಿ ಮಾಡುತ್ತಿದ್ದರೆಂದರೆ ಸಾಕ್ಷಿಯು ಪಿ ವೀರಪ್ಪ ಎಂದು ಸಹಿ ಮಾಡುತ್ತಿದ್ದರೆಂದು ಹೇಳುತ್ತಾರೆ. ಸಾಕ್ಷಿಗೆ 6 ಕಂದಾಯ ಪಾವತಿಗಳನ್ನು ತೋರಿಸಿ ಅವುಗಳಲ್ಲಿ ಕಂಡುಬರುವ ಪಿ.ವೀರಪ್ಪನವರ ಸಹಿ ನಿಮ್ಮ ದೊಡ್ಡಪ್ಪನದೇ ಎಂದು ಪ್ರಶ್ನಿಸಲಾಗಿ ಸಾಕ್ಷಿಯು ಸಹಿ ಅವರದ್ದಲ್ಲ ಅವರು ನನ್ನ ದತ್ತುಪಡೆದಿರುವ ತಂದೆ ಎಂದು ಉತ್ತರಿಸಿದ್ದಾರೆ. ಸದರಿ ಸಹಿ ನನ್ನ ದೊಡ್ಡಪ್ಪನದೇ ಆಗಿದ್ದರೂ ಇಲ್ಲವೆಂದು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪಿ ವೀರಪ್ಪರವರು ಯಾವ ರೀತಿ ಸಹಿ ಮಾಡುತ್ತಿದ್ದಾರೆಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಅವರ ಸಹಿಯನ್ನು ಮಾತ್ರ ನೋಡಿದ್ದೇನೆ ಅವು ಸಹಿ ಮಾಡಿರುವ

ಯಾವುದೇ ದಾಖಲೆಗಳನ್ನು ನೋಡಿಲ್ಲವೆಂದರೆ ಸಾಕ್ಷಿಯು ದಾಖಲೆಗಳನ್ನು ನೋಡಿದ್ದೇನೆ ಈಗ ತೋರಿಸಿದ ಸಹಿ ಅವರದ್ದಲ್ಲವೆಂದು ತಿಳಿಸಿದ್ದಾರೆ. ನಾನು ನೋಡಿರುವ ಪಿ ವೀರಪ್ಪ ಎಂಬ ಸಹಿ ಇರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

ನನ್ನ ದೊಡ್ಡಪ್ಪ ನನ್ನನ್ನು ದತ್ತು ತೆಗೆದುಕೊಂಡ ಸಂಬಂಧ ನೊಂದಾಯಿತ ದಾಖಲೆ ಮಾಡಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ನಾನು ವಿವಾಹಿತನಾಗಿದ್ದೇನೆ. ನನ್ನ ವಿವಾಹ ಲಗ್ನಪತ್ರಿಕೆಯನ್ನು ಹಾಜರುಪಡಿಸಿಲ್ಲ. ಸಾಕ್ಷಿಗೆ ಕುಬೇರಪ್ಪ ಎಂಬ ಹೆಸರಿನ ವ್ಯಕ್ತಿಯ ಆಧಾರಕಾರ್ಡ ನೊಟರೈಸ್ಡ ಪ್ರತಿಯನ್ನು ತೋರಿಸಿ ಅದರಲ್ಲಿ ಅವರ ತಂದೆಯ ಹೆಸರು ಏನೆಂದು ಬರೆಯಲಾಗಿದೆ ಎಂದು ಪ್ರಶ್ನಿಸಲಾಗಿ ಅದರಲ್ಲಿ ವೀರಪ್ಪ ಪರಶೆಟ್ಟಿ ಎಂಬುದಾಗಿ ಬರೆಯಲಾಗಿದೆ ಎಂದು ತಿಳಿಸಿದ್ದಾರೆ. ನಿಪಿ-7 ರ ರೇಶನ್ ಕಾರ್ಡಿನಲ್ಲಿ ವಾದಿಯ ಗಂಡನ ಹೆಸರು ವೀರಪ್ಪ ಪರಶೆಟ್ಟಿ ಎಂಬುದಾಗಿ ನಮೂದಿಸಲಾಗಿದೆ ವಾದಿಯು ವೀರಭದ್ರಪ್ಪ, ಶಾಂತರಾಜು, ಕುಬೇರಪ್ಪ ಮತ್ತು ವಸಂತಕುಮಾರ್ ಹಾಗೂ ಲಲಿತಾರವರ ತಾಯಿ ಎಂದರೆ ನನಗೆ ಗೊತ್ತಿಲ್ಲ. ಶಾಲಾ ದಾಖಲಾತಿಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಿ ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ.

ನನ್ನನ್ನು ಶಾಲೆಗೆ ವಿರುಪಾಕ್ಷಪ್ಪರವರು ದಾಖಲಿಸಿದ್ದಾರೆಂದರೆ ಸರಿಯಲ್ಲ ವೀರಪ್ಪರವರೇ ದಾಖಲಿಸಿದ್ದಾರೆ. ಅದನ್ನು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಅಂತಹ ಯಾವುದೇ ದಾಖಲೆ ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ಸಾಕ್ಷಿಗೆ ದಾಖಲೆಯೊಂದನ್ನು ತೋರಿಸಿ ಕುಬೇರಪ್ಪರವರ ವಿವಾಹವನ್ನು ವೀರಪ್ಪನವರೇ ಮುಂದಾಳತ್ವವಹಿಸಿ ನೇರವೇರಿಸಿದ್ದರಿಂದ ಅವರ ಲಗ್ನಪತ್ರಿಕೆಯಲ್ಲಿ ಸುಖಾಗಮನ ಬಯಸುವವರು ಪಿ ವೀರಪ್ಪ, ಸುಮಿತ್ರಮ್ಮ ಶಾಂತಮ್ಮ ಎಂಬ ವಿವರಗಳನ್ನು ನಮೂದಿಸಲಾಗಿದೆ ಎಂದರೆ ಸರಿಯಲ್ಲ. 1997 ನೇ ಸಾಲಿನಲ್ಲಿ ನನ್ನ ದೊಡ್ಡಪ್ಪ ಬದುಕಿದ್ದರೆಂದರೆ ಸರಿ. ವೀರಪ್ಪನವರೇ ಕುಬೇರಪ್ಪರವರ ಮದುವೆ ಮಾಡಿರುವ ವಿಚಾರ ತಿಳಿದಿದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಸ್ವತ್ತಿನ ಮೂಲ ದಾಖಲೆಗಳನ್ನು ಪರಶೆಟ್ಟಿ ವೀರಪ್ಪನವರು ವಾದಿಗಳ ಬಳಿಯಲ್ಲೇ ನೀಡಿದ್ದರು ಕಾರಣ ಅವರು ಅವರೊಡನೆಯೇ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ನಿಪಿ-3 ರ

ದಾಖಲೆ ಪರಶೆಟ್ಟಿ ವೀರಪ್ಪನವರ ಮರಣ ಪ್ರಮಾಣಪತ್ರ. ಸದರಿ ದಾಖಲೆಯಲ್ಲಿ ಹೆಸರು ಎಂಬ ಕಾಲಂ ನಲ್ಲಿ ವೀರಣ್ಣ ಎಂಬುದಾಗಿ ನಮೂದಿಸಲಾಗಿದೆ ಎಂದರೆ ಸರಿ. ಪರಶೆಟ್ಟಿ ವೀರಪಪರವರು ವಾದಿಯ ಗಂಡನಾಗಿದ್ದುಅ ವರ ಜೀವಿತಾವಧಿಯವರೆಗೂ ಅವರು ಅವರೊಡನೇ ವಾಸಿಸುತ್ತಿದ್ದರು ಆದುದರಿಂದಲೇ ಅಸಲು ದಾಖಲೆಗಳು ವಾದಿಯ ಮನೆಯಲ್ಲಿ ಲಭ್ಯವಾಗಿವೆ, ವಾದಿಯು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆಂದರೆ ಸರಿಯಲ್ಲ. ನಾನು ಪರಶೆಟ್ಟಿ ವೀರಪ್ಪರವರ ದತ್ತುಮಗನಲ್ಲದಿದ್ದರೂ ಸಹಾ ದಾಖಲೆಗಳನ್ನು ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ಪರಶೆಟ್ಟಿ ವೀರಪ್ಪ ಮತ್ತು ಕಾಳಮ್ಮರವರಿಗೆ ಮಕ್ಕಳು ಇರಲಿಲ್ಲ, ವೀರಭದ್ರಪ್ಪ, ಶಾಂತರಾಜು, ಕುಬೇರಪ್ಪ, ವಸಂತಕುಮಾರ್, ಲಲಿತಮ್ಮ ಹಾಗೂ ವಾದಿ ಪರಶೆಟ್ಟಿ ವೀರಪ್ಪರವರ ಕಾನೂನುಬದ್ಧ ವಾರಸುದಾರರು ಎಂದರೆ ಸರಿಯಲ್ಲ.

ನಿಪಿ-20 ರಲ್ಲಿ ಕಂಡುಬರುವ ಸಹಿಯನ್ನು ತೋರಿಸಲಾಗಿ ಸಾಕ್ಷಿಯು ಅದು ವೀರಪ್ಪರವರ ಸಹಿ ಎಂದು ಒಪ್ಪಿದ್ದಾರೆ. ಸದರಿ ದಾಖಲೆಯನ್ನು ಪಿ ವೀರಪ್ಪರವರು ವಾದಿ ಮತ್ತು ಅವರ ಮಗಳು ಲಲಿತಮ್ಮರವರ ಹೆಸರಿಗೆ ಬರೆದುಕೊಟ್ಟಿದ್ದಾರೆಂದರೆ ಸರಿಯಲ್ಲ. ವಾದಿಯು ಪಿ ವೀರಪ್ಪರವರ ಕಾನೂನುಬದ್ಧ ಪತ್ನಿಯಾಗಿರುವ ಕಾರಣ ನಿಪಿ-20 ನ್ನು ಆಕೆಗೆ ಬರೆದುಕೊಡಲಾಗಿದೆ ಎಂದರೆ ಸರಿಯಲ್ಲ.

ನಾನು ಮತ್ತು ನನ್ನ ತಂದೆ ಸೇರಿ ಪರಶೆಟ್ಟಿ ವೀರಪ್ಪರವರ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ಶಾಲಾ ದಾಖಲಾತಿಗಳನ್ನು ಸೃಷ್ಟಿಸಿದ್ದೇವೆ, ಈಗ ಅದಕ್ಕೆ ಪೂರಕವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೂವಿನ ಹಡಗಲಿ.